

# 'ನನ್ನ ಮಗಳು ಸಿನಿಮಾ ಮಾಡ್ತಿಲ್ಲ'

'ನಟಿ ಸುಧಾರಾಣಿ ಮಗಳು ನಿಧಿ, ನಟನೆಗೆ ಇಳಿದಿದ್ದಾರೆ. ನಾಯಕಿಯಾಗಿ ಪರಿಚಿತರಾಗುತ್ತಿದ್ದಾರೆ' ಹೀಗೊಂದು ಸುದ್ದಿ ಗಾಂಧಿನಗರದ ಗಲ್ಲಿಯಲ್ಲಿ ಹುಟ್ಟಿ, ಮಾಧ್ಯಮ ಪಡಸಾಲೆಯಲ್ಲಿಯೂ ಪ್ರತಿಧ್ವನಿಸುತ್ತಿತ್ತು. ನಟಿಸುತ್ತಿದ್ದಾರೆ ಎಂದಷ್ಟೇ ಅಲ್ಲ, 'ಧರ್ಮ ಕೀರ್ತಿರಾಜ್ ಅವರ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ', 'ಪ್ರೇಮ್ ನಿರ್ದೇಶನದ ಹೊಸ ಸಿನಿಮಾದಲ್ಲಿ ನಾಯಕಿಯಾಗಿ ಲಾಂಚ್ ಆಗುತ್ತಿದ್ದಾರೆ. ಅಭಿಷೇಕ್ ಎಂಬ ಹೊಸ ಹುಡುಗ ಆ ಚಿತ್ರಕ್ಕೆ ಹೀರೊ' ಹೀಗೆ ಹಲವು ಸುದ್ದಿಗಳು 'ಖಚಿತ' ಎಂಬ ಧಾಟಿಯಲ್ಲಿಯೇ ಜಾಲತಾಣಗಳಲ್ಲಿ ಸದ್ದು ಮಾಡಿದ್ದವು.

ಆದರೆ ಈ ಎಲ್ಲವೂ ಶುದ್ಧ ಸುಳ್ಳುಸುದ್ದಿಗಳು. ನಿಧಿ ಯಾವ ಸಿನಿಮಾದಲ್ಲಿಯೂ ನಟಿಸುತ್ತಿಲ್ಲ. ಹೀಗೆಂದು ಸ್ವತಃ ಸುಧಾರಾಣಿ ಅವರೇ ಖಚಿತಪಡಿಸಿದ್ದಾರೆ. 'ನನ್ನ ಮಗಳು ಸಿನಿಮಾದಲ್ಲಿ ನಟಿಸುತ್ತಿದ್ದಾಳೆ ಎಂಬುದು ಸುಳ್ಳು ಸುದ್ದಿ. ಯಾರೋ ಒಂದಿಷ್ಟು ಜನ ಅವರ ಮತಲಬಿಗಾಗಿ ಹಬ್ಬಿಸಿರುವ ಸುದ್ದಿಯೇ ದೊಡ್ಡದಾಗಿದೆ. ನಾನು ಇದುವರೆಗೆ ಸಾಕಷ್ಟು ಜನರಿಗೆ ಇದು ಸುಳ್ಳು ಸುದ್ದಿ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಆದರೆ ಆ ಕುರಿತು ಮತ್ತೆ ಮತ್ತೆ ಅಂತೆಕಂತೆಗಳು ಹಬ್ಬುತ್ತಲೇ ಇವೆ' ಎಂದು ಕೊಂಚ ಸಿಟ್ಟಿನಿಂದಲೇ ಹೇಳುತ್ತಾರೆ ಸುಧಾರಾಣಿ.

'ನಿಧಿ ಈಗಿನ್ನೂ ಹನ್ನೆರಡನೇ ತರಗತಿ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿದ್ದಾಳೆ. ಸದ್ಯಕ್ಕೆ ಅವಳ ಗಮನ ಪೂರ್ತಿಯಾಗಿ ಶಿಕ್ಷಣದ ಮೇಲಿದೆ. ಅಭಿನಯದ ಕುರಿತು ಈಗ ಅವಳಲ್ಲಿ ಯಾವ ಆಸಕ್ತಿಯೂ ಇಲ್ಲ, ಯಾವ ಸಿನಿಮಾವನ್ನು ಒಪ್ಪಿಕೊಂಡೂ ಇಲ್ಲ. ಹಾಗೇನಾದರೂ ಅವಳು ಸಿನಿಮಾದಲ್ಲಿ ನಟಿಸುವುದಾದರೆ ನಾನೇ ಮುಂದೆ ನಿಂತು ಖಚಿತಪಡಿಸುತ್ತೇನೆ' ಎಂದೂ ಅವರು ಹೇಳಿದ್ದಾರೆ.

ನಿಧಿ ಮುಂದೆಂದೂ ಸಿನಿಮಾದಲ್ಲಿ ನಟಿಸುವುದಿಲ್ಲ ಎಂದೂ ಸುಧಾರಾಣಿ ಹೇಳುವುದಿಲ್ಲ. 'ನಟನೆ ಎನ್ನುವುದು ಅವಳ ಆಸಕ್ತಿಗೆ ಸಂಬಂಧಿಸಿದ್ದು. ಈಗ ವಿದ್ಯಾಭ್ಯಾಸದ ಮೇಲೆ ಸಂಪೂರ್ಣ ಗಮನ ಇದೆ. ವಿದ್ಯಾಭ್ಯಾಸ ಮುಗಿದ ಮೇಲೆ ನಟನೆಯ ಕುರಿತು ಆಸಕ್ತಿ ಹುಟ್ಟಿದರೆ ಸಿನಿಮಾ ಕ್ಷೇತ್ರಕ್ಕೆ ಬಂದರೂ ಬರಬಹುದು. ಅವಳು ಯಾವತ್ತೂ ನಟಿಸುವುದೇ ಇಲ್ಲ ಎಂದು ನಾನು ಹೇಳಲಾರೆ. ಆದರೆ ಸದ್ಯಕ್ಕಂತೂ ಅಂಥ ಯಾವ ಆಲೋಚನೆಯೂ ಇಲ್ಲ' ಎಂದು ಅವರು ಮತ್ತೊಮ್ಮೆ ಸ್ಪಷ್ಟಪಡಿಸುತ್ತಾರೆ.

# 'ಒಂದಲ್ಲಾ ಎರಡಲ್ಲಾ'ಗೆ ಪ್ರಶಸ್ತಿಯ ಬೆಲ್ಲ

'ರಾಮಾ ರಾಮಾ ರೇ' ಸಿನಿಮಾ ಮೂಲಕ ಕನ್ನಡ ಚಿತ್ರರಂಗವೇ ತಮ್ಮ ಕಡೆ ಬೆರಗುಗಣ್ಣಿನಿಂದ ನೋಡುವಂತೆ ಮಾಡಿದ್ದ ಯುವ ನಿರ್ದೇಶಕ ಡಿ. ಸತ್ಯಪ್ರಕಾಶ್ ಎರಡನೇ ಪ್ರಯತ್ನ 'ಒಂದಲ್ಲಾ ಎರಡಲ್ಲಾ'. ಹಸು–ಮಗುವಿನ ಮಾನವೀಯ ಕಥನದ ಮೂಲಕ ಸಮಾಜದ ಬೇರೆ ಬೇರೆ ವರ್ಗದ ಮನುಷ್ಯರ ಜೀವನವಿಧಾನ ಮತ್ತು ಆಲೋಚನಾಕ್ರಮಗಳನ್ನು ಹಿಡಿದಿಡುವ ಭಿನ್ನ ಧಾಟಿಯ ಸಿನಿಮಾ 'ಒಂದಲ್ಲಾ ಎರಡಲ್ಲಾ'. ಸ್ಟಾರ್‌ಗಳ ಹಂಗಿಲ್ಲದೆ, 'ಪ್ರೇರಣೆ'ಗಳ ಪ್ರಭಾವವಿಲ್ಲದೆ ಕಟ್ಟಿದ ಈ ಸಿನಿಮಾ, ಚಿತ್ರಮಂದಿರದಲ್ಲಿ ಉಳಿದಿದ್ದು ಕೆಲವೇ ದಿನಗಳು.

ಜನರಿಗೆ ತಲುಪುವ ಜನಪ್ರಿಯ ಮಾದರಿಯೊಳಗೇ ಪ್ರಯೋಗಶೀಲ ಪ್ರಯತ್ನಗಳನ್ನು ಮಾಡಿ ಗೆಲ್ಲಲು ಸಾಧ್ಯ ಎಂದು ಬಲವಾಗಿ ನಂಬಿರುವ ಸತ್ಯಪ್ರಕಾಶ್ ಅವರಿಗೆ ಎರಡನೇ ಚಿತ್ರಕ್ಕೆ ಸಿಕ್ಕ ನೀರಸ ಸ್ಪಂದನದಿಂದ ನಿರಾಸೆಯಾಗಿದ್ದು ನಿಜ. ಆದರೆ ಈ ನಿರಾಸೆಯ ಗಾಯಕ್ಕೆ ಮುಲಾಮು ಎಂಬಂತೆ ಅವರ ಚಿತ್ರವನ್ನು ಮುಂಬೈನ 'ಕ್ರಿಟಿಕ್ಸ್ ಚಾಯ್ಸ್ ಫಿಲಂ ಅವಾರ್ಡ್ಸ್' ಗುರ್ತಿಸಿ '2018ರ ಕನ್ನಡದ ಅತ್ಯುತ್ತಮ ಚಿತ್ರ' ಎಂಬ ಪ್ರಶಸ್ತಿ ನೀಡಿದೆ.

ಮೋಶನ್ ಕಂಟೆಂಟ್ ಗ್ರೂಪ್ ಮತ್ತು ಫಿಲಂ ಕ್ರಿಟಿಕ್ಸ್ ಗೈಡ್ ಎಂಬ ಎರಡು ಸಂಸ್ಥೆಗಳು ವಿಸ್ತಾಸ್ ಕೆಪಿಟಲ್ ಸಹಯೋಗದಲ್ಲಿ ಇದೇ ಮೊದಲಬಾರಿಗೆ ಪ್ರಾದೇಶಿಕ ಭಾಷೆಯಲ್ಲಿ ಬಂದಿರುವ ಅತ್ಯುತ್ತಮ ಚಿತ್ರವನ್ನು ಗುರ್ತಿಸಿ ಪ್ರಶಸ್ತಿ ನೀಡುತ್ತಿದೆ. ವಿವಿಧ ಭಾಷೆಯ ಸಿನಿಮಾ ವಿಮರ್ಶಕರೇ ಈ ಪ್ರಶಸ್ತಿಗಳಿಗೆ ಚಿತ್ರಗಳನ್ನು ಆಯ್ಕೆ ಮಾಡುತ್ತಾರೆ.

ಕನ್ನಡದಿಂದ ಅಂತಿಮ ಸುತ್ತಿಗೆ ಮಂಸೋರೆ ನಿರ್ದೇಶನದ 'ನಾತಿಚರಾಮಿ', ಚಂಪಾ ಶೆಟ್ಟಿ ನಿರ್ದೇಶನದ 'ಅಮ್ಮಚ್ಚಿಯೆಂಬ ನೆನಪು' ಮತ್ತು 'ಒಂದಲ್ಲಾ ಎರಡಲ್ಲಾ' ನಾಮನಿರ್ದೇಶನಗೊಂಡಿದ್ದವು. ಅಂತಿಮವಾಗಿ 'ಒಂದಲ್ಲಾ ಎರಡಲ್ಲಾ' ಸಿನಿಮಾಗೆ ಪ್ರಶಸ್ತಿ ನೀಡಲಾಗಿದೆ. ಇತ್ತೀಚೆಗೆ ಮುಂಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಬಾಲಿವುಡ್‌ನ ಖ್ಯಾತ ನಟ ಶಾರುಖ್ ಖಾನ್ ಅತಿಥಿಯಾಗಿದ್ದರು.

ಸದ್ಯಕ್ಕೆ ಡಿ. ಸತ್ಯಪ್ರಕಾಶ್ ಒಂದಿಷ್ಟು ಹೊಸ ಬರಹಗಾರ ತಂಡ ಕಟ್ಟಿಕೊಂಡು ಪ್ರತಿಭಾವಂತರನ್ನು ಚಿತ್ರರಂಗಕ್ಕೆ ತರುವ ಪ್ರಯತ್ನದಲ್ಲಿ ತೊಡಗಿಕೊಂಡಿದ್ದಾರೆ. ಜೊತೆಗೆ ಹೊಸ ಸಿನಿಮಾವೊಂದರ ಬರವಣಿಗೆಯಲ್ಲಿಯೂ ತೊಡಗಿಕೊಂಡಿದ್ದಾರೆ.

